<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>

<u>ಓ ಎಸ್ ನಂ **185/2018**</u>

| | | |
|---|---|---|
| ಸಾಕ್ಷಿದಾರರ ಹೆಸರು | ಷಣ್ಮುಖಪ್ಪ ಕರಿಯಪ್ಪನವರ | ಡಿಡಬ್ಲ್ಯೂ **1** |
| ತಂದೆ ಹೆಸರು | ಬಸಪ್ಪ | |
| ವಯಸ್ಸು | **56** ವರ್ಷ | |
| ಉದ್ಯೋಗ | ಶೇತ್ಕರಿ | |
| ವಾಸಸ್ಥಳ | ಕಾಟೇನಹಳ್ಳಿ | |

<u>ದಿಃ**04.02.2019** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃಪ್ರತಿವಾದಿ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ಸಂಗತಿಗಳೆಲ್ಲವನ್ನು ನಾನೇ ಸ್ವತಃ ಹೇಳಿ ಬರೆಯಿಸಿದ್ದು, ಅವೆಲ್ಲವುಗಳು ಸತ್ಯವಾಗಿರುತ್ತವೆ.

ದಿಃ08.05.1919 ರ ಖರೀದಿ ಪತ್ರದ ದೃಢೀಕೃತ ನಕಲಿನಲ್ಲಿ ಬರೆಯಲಾದ ವಿವರ ಸರಿಯಾಗಿ ಕಾಣುವುದಿಲ್ಲ ಎಂದು ವಾದಿ ಪರ ವಕೀಲರು ಮನವಿ ಸಲ್ಲಿಸಿದ್ದರಿಂದ, ಸದರಿ ಮನವಿಯನ್ನು ಪುರಸ್ಕರಿಸಿ ತಕರಾರಿಗೆ ಒಳಪಟ್ಟು ನಿಡಿ.1 ಎಂದು, ಕಾಟೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಆದ ಠರಾವು ನಂಬರ 23 ದಿಃ08.05.1974 ರ ದೃಢೀಕೃತ ನಕಲಿನಲ್ಲಿ ಬರೆಯಲಾದ ವಿವರ ಸರಿಯಾಗಿ ಕಾಣುವುದಿಲ್ಲ ಎಂದು ವಾದಿ ಪರ ವಕೀಲರು ಮನವಿ ಸಲ್ಲಿಸಿದ್ದರಿಂದ, ಸದರಿ ಮನವಿಯನ್ನು ಪುರಸ್ಕರಿಸಿ ತಕರಾರಿಗೆ ಒಳಪಟ್ಟು ನಿಡಿ.2 ಎಂದು, ಆಸ್ತಿ ನಂಬರ 17/ಬಿ2 ಮತ್ತು 14 ಸಿರ ಭೂ ಆಕರಣೆಯ ಯಾದಿಯ ಉತಾರಗಳನ್ನು ಕ್ರಮವಾಗಿ ನಿಡಿ3 ಮತ್ತು 4 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ವಜಾ ಮಾಡಿಕೊಡಬೇಕೆಂದು ಪಾರ್ಥಿಸುತ್ತೇನೆ.

<u>ಪಾಟೀ ಸವಾಲುಃ ಪ್ರತಿ ವಾದಿ ಪರ ಶ್ರೀ ಪಿ ಎಂ ಬಿ ವಕೀಲರಿಂದಃ</u> ವಿನಂತಿಯ ಮೇರೆಗೆ ಮುಂದೂಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).**

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**,**
ಹಾವೇರಿ**.**

-4-  ಓ ಎಸ್.ನಂ , ಡಿಡಬ್ಲ್ಯೂ-